# ಮೈಸೂರು ಅರಸರ ಕಾಲದ ಕನ್ನಡ ಸಾಹಿತ್ಯ

**ಬಸವರಾಜು ಕೆ.**
ಸಹ ಪ್ರಾಧ್ಯಾಪಕರು
ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ವಿರಾಜಪೇಟೆ.

Article Link: https://aksharasurya.com/2024/04/basavaraju-k.php

DOI: https://doi.org/10.5281/zenodo.10929582

## ABSTRACT:

1881ರಲ್ಲಿ ಬ್ರಿಟಿಷ್ ಕಮಿಷನರುಗಳ ಆಳ್ವಿಕೆ ಕೊನೆಗೊಂಡು ಮೈಸೂರು ಒಡೆಯರಿಗೆ ಅಧಿಕಾರ ಮರುಕಳಿಸಿತು. ಅನಂತರ ಅವರು ಸಾಹಿತ್ಯಕ್ಕೆ ತಮ್ಮದೇ ಕೊಡುಗೆಯನ್ನು ನೀಡಿದ್ದಾರೆ. ಹಾಗೆಯೇ ದಿವಾನರ ಬೆಂಬಲವೂ ಕೂಡ ಸಾಹಿತ್ಯ ಬೆಳವಣಿಗೆಯಲ್ಲಿ ಮುಖ್ಯಪಾತ್ರವಹಿಸಿದೆ. ಮಹಾರಾಜರುಗಳಾದ ಚಾಮರಾಜ ಒಡೆಯರ್, ನಾಲ್ವಡಿ ಕೃಷ್ಣರಾಜಒಡೆಯರ್, ರಣಧೀರ ಕಂಠೀರವ ನರಸರಾಜಒಡೆಯರ್, ಚಿಕ್ಕದೇವರಾಜ, ಚಾಮರಾಜಒಡೆಯರ್, ದಿವಾನರುಗಳಾದ ರಂಗಾಚಾರ್ಲು, ಶೇಷಾದ್ರಿ ಅಯ್ಯರ್, ವಿಶ್ವೇಶ್ವರಯ್ಯ ಮತ್ತು ಮಿರ್ಜಾ ಇಸ್ಮಾಯಿಲ್ ಮುಂತಾದವರ ಕೊಡುಗೆಗಳು ಅಸ್ಮರಣೀಯವಾದದು.

ಸುಮಾರು 400 ವರ್ಷಗಳ ಕಾಲ ಆಳಿದ ಮೈಸೂರು ಅರಸರು ಸ್ವಯಂ ಕವಿಗಳೂ ಹೌದು. ಕಾವ್ಯ ಕನ್ನಡದ ಅನೇಕ ವಿದ್ವಾಂಸರು, ಕವಿ–ನಾಟಕಕಾರರಿಗೆ ಹಾಗೂ ಭಾಷಾಂತರಕಾರರಿಗೆ ಆಶ್ರಯ ನೀಡಿ ಪ್ರೋತ್ಸಾಹಿಸಿ ಬೆಳೆಸಿದ್ದಾರೆ. ಮೈಸೂರು ಅರಸರ ಆರಂಭದ ಕಾಲಘಟ್ಟದಿಂದ ಭಾರತ ಸ್ವಾತಂತ್ರ್ಯಗೊಳ್ಳುವವರೆಗೂ ರಚಿತವಾದ ಕೃತಿಗಳೇ ಮೈಸೂರು ಅರಸರ ಐತಿಹ್ಯಕ್ಕೂ ಸಾಕ್ಷಿಯನ್ನು ಒದಗಿಸಿವೆ.

ಕನ್ನಡ ಸಾಹಿತ್ಯಕ್ಕೆ, ಪ್ರೋತ್ಸಾಹಿಸಿ ಸ್ಫೂರ್ತಿಯಾದ ಮೈಸೂರು ಅರಸರು ವಿಜಯನಗರದ ಪರಮಾಧಿಕಾರವನ್ನು ಅಲ್ಲಗಳೆದು ಸ್ವತಂತ್ರವಾದಾಗಿನಿಂದ ಮೈಸೂರು ಒಡೆಯರ ಸ್ವತಂತ್ರ ಆಡಳಿತದ ಕಾಲ ಆರಂಭವಾಯಿತು. ಒಂದನೆಯ ರಾಜ ಒಡೆಯರ ಕಾಲದಿಂದ ಆರಂಭಗೊಂಡು ಜಯಚಾಮರಾಜ ಒಡೆಯರ ಕಾಲದವರೆಗೂ ಕನ್ನಡ ಸಾಹಿತ್ಯವು ಸರ್ವತೋಮುಖ ಅಭಿವೃದ್ಧಿ ಪಡೆಯಿತು.

## KEYWORDS:

ಚಿಕ್ಕದೇವರಾಜ ಒಡೆಯರ್, ರಣಧೀರ ಕಂಠೀರವ, ಚಿಕ್ಕದೇವ ರಾಜ ಒಡೆಯರ್, ಮುಮ್ಮಡಿ ಕೃಷ್ಣರಾಜ ಒಡೆಯರ್, ಚಾಮರಾಜ ಒಡೆಯರು.

**ಸಾಹಿತ್ಯ ಅಭಿವೃದ್ಧಿಗೆ ಸಹಕರಿಸಿದ ರಾಜರುಗಳು:**

1. ಮೊದಲನೆಯ ರಾಜ ಒಡೆಯರ್
2. ಆರನೆಯ ಚಾಮರಾಜ ಒಡೆಯರ್
3. ರಣಧೀರ ಕಂಠೀರವನರಸರಾಜ ಒಡೆಯರ್
4. ಚಿಕ್ಕದೇವ ರಾಜ ಒಡೆಯರ್
5. ಮುಮ್ಮಡಿ ಕೃಷ್ಣರಾಜ ಒಡೆಯರ್
6. ಚಾಮರಾಜ ಒಡೆಯರ್

'ಚಿಕ್ಕದೇವರಾಯನ ವಂಶಾವಳಿ'ಯೂ ಮೊದಲನೆಯ ರಾಜ ಒಡೆಯರ ಚರಿತ್ರೆಯಿಂದಲೇ ಆರಂಭವಾಗಿದೆ. ಈತನ ಪ್ರಧಾನ ಮಂತ್ರಿಯಾಗಿದ್ದ ತಿರುಮಲಾರ್ಯನೆಂಬ ಶ್ರೀ ವೈಷ್ಣವ ಕವಿಯೂ ಕರ್ಣವೃತ್ತಾಂತಕಥೆ ಎಂಬ ಸಾಂಗತ್ಯ ಕಾವ್ಯವನ್ನು ರಚಿಸಿದ್ದಾನೆ. ಮಹಾಭಾರತದ ಶಾಂತಿ ಪರ್ವದಲ್ಲಿ ಬಂದಿರುವ ಕರ್ಣಚರಿತ್ರೆಯೇ ಈ ಗ್ರಂಥದ ವಸ್ತು.

**ಆರನೆಯ ಚಾಮರಾಜ ಒಡೆಯರ್:**

ಆರನೆಯ ಚಾಮರಾಜ ಒಡೆಯರ್ 'ಚಾಮರಾಜೋಕ್ತಿವಿಲಾಸ' ಎಂಬ ಹೆಸರಿನಲ್ಲಿ ವಾಲ್ಮೀಕಿ ರಾಮಾಯಾಣವನ್ನು ಸರಳಗನ್ನಡ ಗದ್ಯಕಾವ್ಯವಾಗಿ ಬರೆದಿದ್ದಾರೆ. ಇವರ ಆಶ್ರಯದಲ್ಲಿದ್ದ ರಾಮಚಂದ್ರನೆಂಬ ವಿದ್ವಾಂಸ ಒಂದು ಅಶ್ವಶಾಸ್ತ್ರ ಕೃತಿಯನ್ನು ರಚಿಸಿದ್ದಾನೆ. ಶಾಲಿಹೋತ್ರಕೃತವಾದ ಸಂಸ್ಕೃತ ಗ್ರಂಥವನ್ನು ಬಾಲಕರಿರುವಂತೆ ಸಾಮಗೋಪಾಂಗವಾಗಿ ಕನ್ನಡಿಸಿ ಬರೆದ ಅನುವಾದವಿದು. ಪದ್ಮಣಪಂಡಿತ ತನ್ನ ರಾಜನ ಆಣತಿಯಂತೆ 'ಹಯಸಾರಸಮುಚ್ಚಯ' ಎಂಬ ಪದ್ಯಗ್ರಂಥವನ್ನು ರಚಿಸಿದ್ದಾನೆ. ವಿದ್ವಜ್ಜನಮಂಡನನೆಂದೂ ವೈದ್ಯಸುವಂಶಾಂಬರ ಸೂರ್ಯನೆಂದೂ ಕವಿ ತನ್ನನ್ನು ತಾನೇ ಹೋಗಳಿಕೊಂಡಿದ್ದಾನೆ.

**ಕಂಠೀರವ ನರಸರಾಜ ಒಡೆಯರ್:**

ಮೈಸೂರಿನ ರಾಜ್ಯವನ್ನು ವಿಸ್ತರಿಸಿ, ಶತ್ರುಗಳನ್ನು ಅಡಗಿಸಿ, ಮೈಸೂರು ರಾಜ್ಯ ಅಭ್ಯುದಯವನ್ನು ಸಾಧಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಈತನ ಆಸ್ಥಾನ ಕವಿಯಾದ ಗೋವಿಂದ ವೈದ್ಯ 'ಕಂಠೀರವ ನರಸರಾಜವಿಜಯಂ' ಎಂಬ ವಿಸ್ತಾರವಾದ ಸಾಂಗತ್ಯ ಗ್ರಂಥವನ್ನು ರಚಿಸಿದ್ದಾನೆ. ಇದರಲ್ಲಿ ತನ್ನ ಅರಸನ ಯುದ್ಧ ವಿಜಯಗಳ ವರ್ಣನೆಯಿದೆ. ಮುಖ್ಯ ಕತೆಗೆ ಸಂಬಂಧಿಸಿದ ಮದನಮೋಹಿನಿಯ ಕಥೆಯೂ ಶೃಂಗಾರ ಭರಿತವಾಗಿದ್ದು ಓದುಗರಿಗೆ ಆಕರ್ಷಕವೆನಿಸಿದೆ. ಅಂದಿನ

ನರಸಿಂಹ ಸ್ವಾಮಿ ಕಲಿಯುಗದ ಮನುಜರನ್ನು ಸಂಹರಿಸುವ ಸಲುವಾಗಿ ನರಜನ್ಮದಲ್ಲಿ ಬಂದು ಕಂಠೀರವ ನರಸರಾಜನಾದನಂತೆ. ತನ್ನ ಅರಸ ನರಸಿಂಹನ ಅವತಾರವೇ ಆಗಿರಬೇಕೆಂದು ಕವಿ ಸ್ವಾರಸ್ಯವಾಗಿ ವರ್ಣಿಸಿದ್ದಾನೆ.

**ಚಿಕ್ಕ ದೇವರಾಜ ಒಡೆಯರ್:**

ಚಿಕ್ಕದೇವಾರಾಜ ಒಡೆಯರ್ ಕಾಲವು ಕನ್ನಡ ಸಾಹಿತ್ಯ ಲೋಕದಲ್ಲಿ ಅತ್ಯಂತ ಪ್ರಧಾನವೆಂದೂ ಹೇಳಬಹುದು. ಈತ ಸ್ವಯಂ ಕವಿ. 'ಚಿಕ್ಕದೇವರಾಜ ಬಿನ್ನಪಂ', 'ಗೀತಾಗೋಪಾಲ', 'ಭಾಗವತ', 'ಶೇಷಧರ್ಮ', 'ಭಾರತ' ಎಂಬ ಗ್ರಂಥಗಳನ್ನು ರಚಿಸಿದ. 'ಗೀತಾಗೋಪಾಲ'ದಲ್ಲಿ ತಿರುಮಲಾರ್ಯನೆಂಬ ಆಸ್ಥಾನ ಕವಿಯಿಂದ ರಚಿತವಾದ ಕೆಲವು ಪದ್ಯಗಳು ಸೇರಿವೆ. ಆದ್ದರಿಂದ ಅದನ್ನು ಅರಸನೇ ಬರೆದನೆ ಎಂಬ ವಿಷಯದಲ್ಲಿ ಸಂಶಯ ಮೂಡಿದೆ. 'ಗೀತಾಗೋಪಾಲ' ಜಯದೇವನ 'ಗೀತ ಗೋವಿಂದ'ವೆಂಬ ಸಂಸ್ಕೃತ ಗ್ರಂಥದ ಮಾದರಿಯಲ್ಲಿ ರಚಿತವಾದ ಉತ್ತಮ ಹಾಡುಗಳ ಸಂಕಲನ.

'ಚಿಕ್ಕದೇವ ರಾಜ ಬಿನ್ನಪ' ಒಂದು ಗದ್ಯ ಕಾವ್ಯ. ಮೇಲುಕೋಟೆಯ ಚೆಲುವನಾರಾಯಾಣ ಸ್ವಾಮಿಯಲ್ಲಿದ್ದ ದೃಢಭಕ್ತಿ ಇಲ್ಲಿ ವ್ಯಕ್ತಗೊಂಡಿದೆ. ಚಿಕ್ಕದೇವರಾಯನಿಗೆ ಸಾಹಿತ್ಯ ವಿದ್ಯಾನಿಕಷಪ್ರಸ್ತರಂ, ರಸಿಕಜನಕರ್ಣರಸಾಯನಿಕೃತ, ಸಂಗೀತವಿಸ್ತರಂ ಎಂಬ ಸಾರ್ಥಕವಾದ ಬಿರುದುಗಳಿದ್ದವು. ಈತನ ವಿಷಯವಾಗಿ 'ಚಿಕ್ಕದೇವರಾಜ ವಿಜಯಂ', 'ಚಿಕ್ಕದೇವರಾಯ ವಂಶವಾಳಿ', 'ಚಿಕ್ಕದೇವರಾ ಜಯಶೋಭೂಷಣಂ', 'ಚಿಕ್ಕದೇವರಾಜವಂಶಪ್ರಭಾವ' ಮೊದಲಾದ ಹಲವು ಗ್ರಂಥಗಳು ರಚನೆಗೊಂಡಿವೆ.

ಸ್ವಯಂ ಕವಿಯು, ಸಂಗೀತಜ್ಞನೂ ಆದ ಚಿಕ್ಕದೇವರಾಜ ಅನೇಕ ಕವಿಗಳನ್ನು ತನ್ನ ಆಸ್ಥಾನದಲ್ಲಿ ಆದರಿಸಿ ಅವರಿಂದ ಕಾವ್ಯ ರಚನೆ ಮಾಡಿಸಿದ, ತಿರುಮಲಾರ್ಯ, ಚಿಕುಪಾಧ್ಯಾಯ, ಸಿಂಗರಾರ್ಯ, ತಿಮ್ಮಕವಿ, ಮಲ್ಲರಸ, ಚಿದಾನಂದಕವಿ, ಮಹಾಲಿಂಗ ರಂಗ, ವಿಶಾಲಾಕ್ಷಪಂಡಿತ ಮೊದಲಾದ ಅನೇಕರು ಇವನ ಆಶ್ರಯದಲ್ಲಿದ್ದರು. ಶೃಂಗಾರಮ್ಮ, ಸಂಚಿ ಹೊನ್ನಮ್ಮ ಎಂಬ ಇಬ್ಬರು ಕವಯತ್ರಿಯರು ಈತನ ಆಶ್ರಯದಲ್ಲಿ ಇದ್ದು ಕೃತಿ ರಚನೆ ಮಾಡಿದರು.

ತಿರುಮಲಾರ್ಯ ಚಿಕ್ಕದೇವರಾಯನ ಮಂತ್ರಿ, ಈತ 'ಅಪ್ರತಿಮ ವೀರ ಚರಿತ್ರೆ' ಎಂಬ ಅಲಂಕಾರ ಗ್ರಂಥವನ್ನು 'ಚಿಕ್ಕದೇವರಾಯ ವಂಶಾವಳಿ' ಎಂಬ ಗದ್ಯ ಕಾವ್ಯವನ್ನು 'ಚಿಕ್ಕದೇವರಾಜವಿಜಯಂ' ಎಂಬ ಚಂಪೂ ಕಾವ್ಯವನ್ನು, 'ಚಿಕ್ಕದೇವರಾಜ ಶತಕ'ವನ್ನು ರಚಿಸಿದ್ದಾನೆ.

ಚಿಕ್ಕದೇವರಾಯನ ಆಸ್ಥಾನದ ಇನ್ನೊಬ್ಬ ಮುಖ್ಯ ಕವಿ ಚಿಕುಪಾಧ್ಯಾಯ. ಇವನ ನಿಜವಾದ ಹೆಸರು ಲಕ್ಷ್ಮಿಪತಿ. ಇವನು ಇಪ್ಪತ್ತೆಂಟಕ್ಕೂ ಹೆಚ್ಚಿನ ಕೃತಿಗಳನ್ನು ಬರೆದಿದ್ದಾನೆ. ಅವುಗಳಲ್ಲಿ ಹೆಚ್ಚಿನವು ಮಹಾತ್ಮ್ಯೆ ಗ್ರಂಥಗಳು. ಯದುಗಿರಿ ಮಹಾತ್ಮ್ಯೆ, ವೆಂಕಟಗಿರಿ ಮಹಾತ್ಮ್ಯೆ, ಶ್ರೀರಂಗ ಮಹಾತ್ಮ್ಯೆ, ಕಮಲಾಚಲ ಮಹಾತ್ಮ್ಯೆ, ಹೀಗೆ ಇವುಗಳಲ್ಲಿ ಕೆಲವೂ ಚಂಪೂ ಕಾವ್ಯಗಳು. ಇನ್ನು ಕೆಲವು ಸಾಂಗತ್ಯ ಕೃತಿಗಳು. ಉಳಿದವು ಗದ್ಯ ಗ್ರಂಥಗಳು. ಇವು ಸ್ಥಳ ಪುರಾಣಗಳಾಗಿದ್ದು ಶ್ರೀವೈಷ್ಣವಮತ ಸಿದ್ಧಾಂತ ನಿರೂಪಣೆಗೆ ಸೀಮಿತವಾಗಿವೆ. 'ರಂಗಾಧಾಮಸ್ತುತಿ ಸಾಂಗತ್ಯ' ಶ್ರೀ ರಂಗನಾಥ ಸ್ವಾಮಿಯನ್ನು ನಖಶಿಖಾಂತವಾಗಿ ವರ್ಣಿಸುತ್ತದೆ. ಈ ಕವಿಯು ಚಿತ್ರಕತೆಯಲ್ಲಿ 'ಅಕ್ಷರ ಮಾಲಿಕಾಸಾಂಗತ್ಯ' ಎಂಬ ಕಾವ್ಯ ರಂಗನಾಥ ದೇವರ ಮೇಲೆ ಕ ಕಾರದಿಂದ ಕ್ಷ ಕಾರ ಪರ್ಯಂತ ಅಕ್ಷರ ಮೊದಲಾಗಿಯು ಗುಣಿತದಿಂದಲೂ ಕಲ್ಪಿಸಿ ಹೇಳಿದ ಸಾಂಗತ್ಯ.

ಈ ಕಾಲದ ಇನ್ನೊಬ್ಬ ಮುಖ್ಯ ಕವಿ ಸಿಂಗರಾರ್ಯ. ಈತ ತಿರುಮಲಾರ್ಯನ ತಮ್ಮ. 'ಮಿತ್ರವಿಂದಾಗೋವಿಂದ' ಎಂಬ ಕನ್ನಡದ ಮೊದಲ ನಾಟಕವನ್ನು ರಚಿಸಿದ ಕೀರ್ತಿ ಇವನಿಗೆ ಸಂದಿದೆ. ಶ್ರೀಹರ್ಷನ 'ರತ್ನಾವಳಿ' ನಾಟಕದ ಭಾಷಾಂತರವಿದು.

ಚಿಕ್ಕದೇವರಾಯನ ಆಸ್ಥಾನ ಕವಿಗಳೇ ಮಾತ್ರವಲ್ಲದೆ ಅವನ ಪರಿವಾರಕ್ಕೆ ಸೇರಿದವರೂ ಕನ್ನಡದಲ್ಲಿ ಕೃತಿ ರಚನೆ ಮಾಡಿದ್ದಾರೆ!. ಅವರಲ್ಲಿ ಹೊನ್ನಮ್ಮನೆಂಬ ಕಬ್ಬಿಗಿತಿ ಪ್ರಧಾನಳು. ಇವಳು ಚಿಕ್ಕದೇವರಾಯನ ಅಂತಃಪುರದ ಊಳಿಗಕ್ಕೆ ಸೇರಿದವಳು, ಸಂಚಿಯಹೊನ್ನಿ ಎಂದೇ ಇವಳ ಹೆಸರು. ಇವಳ ಗ್ರಂಥ 'ಹದಿಬದೆಯ ಧರ್ಮ' ಎಂಬ ಸಾಂಗತ್ಯ ಕಾವ್ಯ. ಅಕ್ಕಮಹಾದೇವಿಯಾದ ಮೇಲೆ ಕನ್ನಡದಲ್ಲಿ ಶ್ರೇಷ್ಠ ಕಬ್ಬಿಗಿತ್ತಿ ಈಕೆಯೇ.

'ಪದ್ಮಿನೀಕಲ್ಯಾಣ'ದಲ್ಲಿ ಶ್ರೀನಿವಾಸನಿಗೂ ಪದ್ಮಾವತಿಗೂ ನಡೆದ ವಿವಾಹ ವೈಭವವನ್ನು ಬಣ್ಣಿಸಿದ ಕಬ್ಬಿಗಿತಿ ಶೃಂಗಾರಮ್ಮ. ಇವಳೂ ಚಿಕ್ಕದೇವರಾಯನ ಪೋಷ್ಯವರ್ಗಕ್ಕೆ ಸೇರಿದವಳೇ. ನೂರತೊಂಬತ್ತು ಪದ್ಯಗಳುಳ್ಳ ಪುಟ್ಟ ಸಾಂಗತ್ಯ ಕಾವ್ಯ ಈಕೆಯದು.

ತಿಮ್ಮಕವಿ ಚಿಕ್ಕದೇವರಾಯನ ಆಶ್ರಿತನಾಗಿದು ಅವನ ಸೂಚನೆ ಹಾಗೂ ಚಿಕುಪಾಧ್ಯಾಯನ ಪ್ರೋತ್ಸಾಹಗಳಿಂದ 'ಯದವಗಿರಿ ಮಹಾತ್ಮ್ಯೆ', 'ವೆಂಕಟಗಿರಿ ಮಹಾತ್ಮ್ಯೆ', 'ಪಶ್ಚಿಮ ರಂಗಮಹಾತ್ಮೆ' ಎಂಬ ಮೂರು ಚಂಪೂಕಾವ್ಯಗಳನ್ನು ರಚಿಸಿದ್ದಾನೆ. ಈ ಕಾವ್ಯಗಳ ವಸ್ತುವನ್ನು ಚಿಕುಪಾಧ್ಯಾಯನೇ ಸಾಂಗತ್ಯ ರೂಪದಲ್ಲಿ ಹೇಳಿದ್ದರೂ ಗದ್ಯ ಹಾಗೂ ಚಂಪೂ ರೂಪದಲ್ಲಿ ಹೇಳುವ ಉತ್ಸಾಹ ಈ ಕವಿಗೆ.

ಇದು ಚಂಪೂ ರೂಪದ ಪುನರುಜ್ಜೀವನದಂತೆ ತೋರಬಹುದು.

ಮಲ್ಲಿಕಾರ್ಜುನನೆಂಬ ಇನ್ನೊಬ್ಬ ಕವಿ ಹನ್ನೆರಡು ಅಶ್ವಾಸನೆಗಳುಳ್ಳ 'ಶ್ರೀರಂಗ ಮಹಾತ್ಮ್ಯೆ'ವೆಂಬ ಇನ್ನೊಂದು ಚಂಪೂ ಕಾವ್ಯವನ್ನು ಕಟ್ಟಿದ್ದಾನೆ. ಅದರಲ್ಲಿ ಬ್ರಹ್ಮಾಂಡ ಪುರಾಣೋಕ್ತವಾದ ಶ್ರೀರಂಗ ಕ್ಷೇತ್ರದ ಮಹಿಮೆಯ ವರ್ಣನೆಯಿದೆ. ವೇಣುಗೋಪಾಲ ವರಪ್ರಸಾದನೆಂಬ ಹೆಸರಿನ ಕವಿಯೊಬ್ಬ 'ಚಿಕ್ಕದೇವರಾಜ ವಂಶಾವಳಿ' ಎಂಬ ಒಂದು ಪುಟ್ಟ ಚಂಪೂಕಾವ್ಯವನ್ನು ಕಟ್ಟಿ ಚಿಕ್ಕದೇವರಾಜನ ಪೂರ್ವಿಕರ ಕತೆಯನ್ನು ಸಂಗ್ರಹವಾಗಿ ಹೇಳಿದ್ದಾನೆ.

ಈ ಕಾಲದ ಚಂಪೂಕವಿಗಳಲ್ಲೆಲ್ಲ ಶ್ರೇಷ್ಠನಾದವ ಷಡಕ್ಷರದೇವ. ಈತ ಅರಸನ ಆಸ್ಥಾನ ಕವಿಯಾಗದೆ ಇದ್ದರೂ ಅರಸನ ತಾಯಿ ಅಮೃತಾಂಬೆಯ ಆಶ್ರಯ ಹೊಂದಿದ್ದ. 'ರಾಜಶೇಖರ ವಿಲಾಸ', 'ಶಬರಶಂಕರವಿಲಾಸ', 'ವೃಷಭೇಂದ್ರ ವಿಜಯ' ಎಂಬ ಮೂರು ಪ್ರೌಢ ಚಂಪೂಕಾವ್ಯಗಳನ್ನು ರಚಿಸಿ ಈತ ಕೀರ್ತಿವಂತನಾಗಿದ್ದಾನೆ. 'ರಾಜಶೇಖರ ವಿಲಾಸ' ಚೋಳದೇಶದ ಅರಸನಾದ ಸತ್ಯೇಂದ್ರನ ಮಗ ಮಂತ್ರಲಕ್ಷ ಅಥವಾ ರಾಜಶೇಖರನ ಭಕ್ತಿ ಪರೀಕ್ಷೆಯ ಕಥೆ.

ಮಹಾಲಿಂಗ ರಂಗನೆಂಬ ಈ ಕಾಲದ ಷಟ್ಪದಿ ಕವಿಯೊಬ್ಬ ಸ್ಮರಣಾರ್ಹ ನಾಗಿದ್ದಾನೆ. ಅವನ ಕೃತಿ 'ಅನುಭವಾಮೃತ'. ಹನ್ನೊಂದು ಅಧ್ಯಾಯಗಳುಳ್ಳ ಈ ಕೃತಿಯು ಭಾಮಿನಿ ಷಟ್ಪದಿಯಲ್ಲಿದೆ. ಈ ಕಾವ್ಯದಲ್ಲಿ ಕವಿಯು 'ಅಖಿಳವೇದಾಂತಾ ರ್ಥ'ವನ್ನು ಸಂಗ್ರಹಿಸಿ ಪೇಳುವೆ ಸಕಲರಿಗೆ ತಿಳಿವಂತೆ ಎಂದು ಪ್ರತಿಜ್ಞೆ ಮಾಡಿದ್ದಾನೆ. ತಿಳಿಯಬೇಕಾದ ಧರ್ಮರಹಸ್ಯವನ್ನು ಕನ್ನಡದಲ್ಲಿ ತಿಳಿದುಕೊಳ್ಳುವುದ್ದು ಶಕ್ಯವಾದರೆ ಸಂಸ್ಕೃತ ಅಗತ್ಯವೇನು? ಎಂದು ಮಹಾಲಿಂಗರಂಗನು ಪ್ರಶ್ನಿಸುವ ಸಾಹಸ ಮಾಡಿರುವುದು ಮೆಚ್ಚತ್ತಕ್ಕ ವಿಚಾರ.

1680ರಲ್ಲಿದ್ದ ಚಿದಾನಂದನೆಂಬ ಜೈನ ಕವಿಯೂ 'ಮುನಿವಂಶಾಭ್ಯುದಯ'ವನ್ನು ರಚಿಸಿ ಜೈನಯತಿ ಪರಂಪರೆಯನ್ನು ವರ್ಣಿಸಿದ್ದಾನೆ. ಶ್ರುತಕೇವಲಿಯಾದ ಬಾಹುಬಲಿ ಮತ್ತು ಚಂದ್ರಗುಪ್ತರ ವೃತ್ತಾಂತ ಇಲ್ಲಿ ವರ್ಣಿತವಾದೆ. ಅದಕ್ಕಿಂತ ಹೆಚ್ಚಾಗಿ ಈ ಸಾಂಗತ್ಯ ಕಾವ್ಯ ಚಿಕ್ಕದೇವರಾಯನ ವಂಶಾವಳಿಯನ್ನು ಹೊಗಳಿದೆ. ಮೈಸೂರಿನ ಅರಸರು ಶ್ರವಣಬೆಳಗೊಳದ ಜೈನಯತಿಗಳಿಗೆ ಮಾಡಿದ ಸಹಾಯದ ವರ್ಣನೆ ಈ ಕಾವ್ಯದಲ್ಲಿ ಬಂದಿದೆ.

ಚಿಕ್ಕದೇವರಾಯನ ಕಾಲದಲ್ಲಿ ವಿಶೇಷವಾಗಿ ನಡೆದ ಸಾಂಗತ್ಯ ಕಾವ್ಯ ಮತ್ತು ಮಹತ್ಮೆ ಗ್ರಂಥಗಳ ರಚನೆ, ಮುಂದಿನ ಕಾಲದ ಅರಸರ ಕಾಲಕ್ಕೂ ಮುಂದುವರೆಯಿತು. ದೊಡ್ಡ ಕೃಷ್ಣರಾಜನ ಧರ್ಮ ಪತ್ನಿಯಾದ ಚೆಲುವಾಂಬೆ

ಎಂಬ ಕಬ್ಬಿಗಿತಿ 'ವರನಂದಿಕಲ್ಯಾಣ', 'ವೆಂಕಟಾಚಲಮಹಾತ್ಮೆ' ಎಂಬ ಕಾವ್ಯಗಳನ್ನು ಕೆಲವು ಲಾಲಿ ಹಾಡುಗಳನ್ನು ರಚಿಸಿದ್ದಾಳೆ. ಕಳಲೆ ನಂಜರಾಜನೆಂಬ ಒಬ್ಬ ದಳವಾಯಿ ಅನೇಕ ಕನ್ನಡ ಕೃತಿಗಳನ್ನು ಬರೆದಿದ್ದಾನೆ. ಇವುಗಳಲ್ಲಿ ಹಲವು ಸ್ಥಳ ಪುರಾಣಗಳಂತಿರುವ ಮಹಾತ್ಮೆಗಳು. ಗರಳಪುರಿ, ಕಾಶಿಭದ್ರಗಿರಿ, ಕಕ್ಕುದ್ಗಿರಿ ಮೊದಲಾದ ಪುಣ್ಯಸ್ಥಳಗಳ ಮಹಿಮೆಯಿದೆ. ಪ್ರಶಂಸಿಸುವ ಕಾವ್ಯಗಳು ಈ ಸೇನಾನಿಯ ಹೆಸರಿನಲ್ಲಿ ಪ್ರಸಿದ್ಧವಾಗಿವೆ. ಈತ ರಚಿಸಿರುವ 'ಹಾಲಾಸ್ಯ ಮಹಾತ್ಮೈ' ಎಪ್ಪತ್ತೊಂದು ಅಧ್ಯಾಯಗಳನ್ನು ಒಳಗೊಂಡ ವಿಸ್ತಾರವಾದ ಗ್ರಂಥ. ಇದಕ್ಕೆ 'ನಂಜರಾಜವಾಣಿವಿಲಾಸ' ಎಂಬ ಇನ್ನೊಂದು ಹೆಸರೂ ಇದೆ.

ಶಾಲ್ಯದ ಕೃಷ್ಣರಾಜ ಎಂಬ ಕವಿ ಸಂಸ್ಕೃತ ಕನ್ನಡ ಮತ್ತು ತೆಲಗು ಭಾಷೆಗಳಲ್ಲಿ ಪಾಂಡಿತ್ಯ ಗಳಿಸಿದ್ದ. ಈತ ಚಿಕುಪಾಧ್ಯಾಯನಂತೆ ಹಲವು ಕಾವ್ಯಗಳನ್ನು ರಚಿಸಿದ್ದಾನೆ. 'ವಿವೇಕಾಭರಣ', 'ಯಯಾತಿ ಕಾವ್ಯ', 'ಸದಾಶಿವ ಶತಕ', 'ಅಪ್ರಸ್ತುತ ಪ್ರಶಂಸಾಶತಕ', 'ಅನುಭವ ರಸಾಯನ' ಮೊದಲಾದವು ಇವನ ಮುಖ್ಯ ಕೃತಿಗಳು. ಈ ಕಾಲದ ಸ್ಮರಣಾರ್ಥವಾದ ಇನ್ನೊಬ್ಬ ಕವಿ ವೆಂಕಾಮಾತ್ಯ. ಈತ ಹೈದಾರಾಲಿಯ ಪ್ರಧಾನಮಂತ್ರಿ. 'ಅಲಂಕಾರಮಣಿದರ್ಪಣ', 'ಇಂದಿರಾಭ್ಯುದಯ', 'ಹನುಮಾದ್ವಿಲಾಸ' ಮತ್ತು 'ರಾಮಾಯಣ'ಗಳನ್ನು ರಚಿಸಿದ್ದಾನೆ.

**ಮುಮ್ಮಡಿ ಕೃಷ್ಣರಾಜ ಒಡೆಯರ್:**

ಇವರು ಅಧಿಕಾರ ರೂಢರಾದ ಮೇಲೆ ಕನ್ನಡ ಸಾಹಿತ್ಯಕ್ಕೆ ಹೆಚ್ಚಿನ ಪೋಷಣೆ ಲಭಿಸಿತು. ಈತನ ಆಶ್ರಯದಲ್ಲಿ ಅನೇಕ ವಿದ್ವಜ್ಜನ ಕೃತಿ ರಚನೆ ಮಾಡಿದ್ದಾರೆ. ಇವರು ತಮ್ಮಿಂದ ಆಡಳಿತ ಕೈತಪ್ಪಿದಾಗಲೂ ಕವಿ ವಿದ್ವಾಂಸರನ್ನು ಅನಾದರಣೆ ಮಾಡಲಿಲ್ಲ. ಕೃಷ್ಣರಾಜ ಒಡೆಯನೇ ಸ್ವಯಂ ಪಂಡಿತನು, ಗ್ರಂಥಕರ್ತನು ಆಗಿದ್ದ. ಇವನ ಹೆಸರಿನಲ್ಲಿ ಸುಮಾರು ಐವತ್ತು ಗ್ರಂಥಗಳು ಪ್ರಸಿದ್ಧವಾಗಿವೆ. ಸಂಸ್ಕೃತದಲ್ಲಿನ ಪುರಾಣ ಇತಿಹಾಸ ನಾಟಕಾದಿಗಳನ್ನು ಕನ್ನಡದಲ್ಲಿ ಬರೆಯಿಸದ ಯಶಸ್ಸು ಮುಮ್ಮಡಿ ಕೃಷ್ಣರಾಜನದು. 'ಶ್ರೀ ಕೃಷ್ಣರಾಜ ವಾಣಿವಿಲಾಸ' ಎಂಬ ಹೆಸರಿನಿಂದ ಪ್ರಸಿದ್ಧವಾಗಿರುವ ಭಾರತ ಟೀಕೆಯನ್ನು ಈತ ಬರೆಸಿದ. ಅಲ್ಲದೆ 'ಸೌಗಂಧಿಕಾಪರಿಣಯ' ಎಂಬ ವಿಸ್ತಾರವಾದ ಕಾವ್ಯವನ್ನು ಗದ್ಯ-ಪದ್ಯಾತ್ಮಕವಾಗಿ ತಾನೇ ರಚಿಸಿದ್ದಾನೆ. ಇದನ್ನೇ ಕವಿ ಮೂವತ್ತಾರು ಅಶ್ವಾಸಗಳಾಗಿ ಬೆಳಸಿ ಆರು ಸಾವಿರಕ್ಕೂ ಹೆಚ್ಚಿನ ಪದ್ಯಗಳಿಂದ ಕೂಡಿದ ಮಹಾಕಾವ್ಯವನ್ನಾಗಿ ಮಾಡಿದ್ದಾನೆ. ಇದಲ್ಲದೆ 'ನಂಜುಂಡ ಶತಕ', 'ದೇವಿ ಮಹಾತ್ಮೆ', 'ಶಂಕರ ಸಂಹಿತೆ', 'ಸಂಖ್ಯಾರತ್ನ ಮಾಲಾಟೀಕೆ' ಎಂಬ ಗ್ರಂಥ ಗಳು ಜನಪ್ರಿಯವಾಗಿವೆ. 'ಶಾಕುಂತಲ' ನಾಟಕ ನವೀನ ಟೀಕೆ ಈತನ ಕೃತಿಗಳಲ್ಲಿ

ಮುಖ್ಯವಾದದ್ದು. ಪುರಾಣ ಪುಣ್ಯ ಕಥೆಗಳಷ್ಟಕ್ಕೆ ಗಮನವನ್ನು ಮೀಸಲಾಗಿಡದೆ ನಾಟಕಗಳನ್ನು ಓದಿ, ಸ್ವಾರಸ್ಯ ಅನುಭವ ಮಾಡಿ, ಅವುಗಳ ಸಾರವನ್ನು ಕನ್ನಡಕ್ಕೆ ತರುವ ಪ್ರಯತ್ನವನ್ನು ಇಲ್ಲಿ ಯಶಸ್ವಿಯಾಗಿ ಮಾಡಲಾಗಿದೆ.

ಈ ರಾಜನ ಕಾಲದಲ್ಲಿ ಇಬ್ಬರು ಗದ್ಯಕವಿಗಳು ಬಹು ಮುಖ್ಯರಾದವರು. ಒಬ್ಬ 'ರಾಜಾವಳೀ ಕಥೆ'ಯನ್ನು ರಚಿಸಿದ ದೇವಚಂದ್ರ, ಇನ್ನೊಬ್ಬ 'ಮುದ್ರಾಮಂಜೂಷ' ರಚಿಸಿದ ಕೆಂಪು ನಾರಾಯಣ. ದೇವಚಂದ್ರ ಜೈನ ಕವಿ 'ರಾಮಕಥಾವತಾರ' ಮತ್ತು 'ರಾಜಾವಳಿ ಕಥೆ' ಎಂಬ ಎರಡು ಗ್ರಂಥಗಳನ್ನು ಬರೆದಿದ್ದಾನೆ.

ಕೆಂಪು ನಾರಾಯಣ ಬ್ರಾಹ್ಮಣ ಕವಿ. ಇವನ ಗ್ರಂಥ 'ಮುದ್ರಾಮಂಜೂಷ' ಈ ಗದ್ಯ ಗ್ರಂಥ ಹಲವು ದೃಷ್ಟಿಯಿಂದ ಮುಖ್ಯವಾಗಿದೆ. ಆಧುನಿಕ ಗದ್ಯಶೈಲಿ ಈ ಗ್ರಂಥ ದಿಂದ ಆರಂಭವಾಯಿತು. ಸುಲಲಿತವಾದ ಸರಳ ಕನ್ನಡದ ವಚನ ರಚನೆಯನ್ನು ಇಲ್ಲಿ ಕಾಣಬಹುದು.

ಇನ್ನೊಬ್ಬ ಕವಿ ಅಳಿಯಲಿಂಗರಾಜ ಅನೇಕ ಗ್ರಂಥಗಳನ್ನು ರಚಿಸಿದ್ದಾನೆ. ಅವುಗಳಲ್ಲಿ ಚಂಪೂ ರೂಪದಲ್ಲಿರುವ ಅಲಂಕಾರ ಗ್ರಂಥ ಮುಖ್ಯವಾದದ್ದು. ಇಲ್ಲಿಯ ಉದಾಹರಣೆ ಪದಗಳೆಲ್ಲ ಮುಮ್ಮಡಿ ಕೃಷ್ಣರಾಜನ ಸುತ್ತಿ ರೂಪವಾಗಿದೆ. ತಿರುಮಲಾರ್ಯ ತನ್ನ ಅಲಂಕಾರ ಗ್ರಂಥದಲ್ಲಿ ಚಿಕ್ಕದೇವರಾಯನನ್ನು ಹೊಗಳಿದ ಮಾದರಿಯನ್ನು ಈ ಕವಿ ಅನುಕರಿಸಿದಂತೆ ತೋರುತ್ತದೆ. ಈತ ಚಂಪೂ, ಷಟ್ಪದಿ, ಸಾಂಗತ್ಯಗಳಲ್ಲಿ ಕೃತಿ ರಚನೆ ಮಾಡಿ ತನ್ನ ಕವಿತಾ ಪ್ರೌಢಿಮೆಯನ್ನು ಮೆರೆದಿದ್ದಾನೆ. 'ಪುತ್ರ ಕಾಮೇಷ್ಠಿ'ಯೆಂಬ ಒಂದು ಯಕ್ಷಗಾನವನ್ನು, 'ಮಹಾಲಿಂಗ ಶತಕ' ಮತ್ತು 'ವೀರ ಭದ್ರಶತಕ'ಗಳೆಂಬ ಎರಡು ಶತಕ ಗ್ರಂಥಗಳನ್ನು ರಚಿಸಿದ್ದಾನೆ.

**ಶ್ರೀ ಚಾಮರಾಜ ಒಡೆಯರ್:**

ಮುಮ್ಮಡಿ ಕೃಷ್ಣರಾಜಒಡೆಯರ ತರುವಾಯ ರಾಜ್ಯಪಟ್ಟವನ್ನೇರಿದವರು ಶ್ರೀ ಚಾಮರಾಜ ಒಡೆಯರು. ಇವರು ಹಿರಿಯರ ಸಂಪ್ರಾದಯವನ್ನು ಅನುಸರಿಸಿ ವಿದ್ವತ್ ಕವಿ ಪೋಷಕರಾಗಿ ಕೀರ್ತಿಗಳಿಸಿದರು. ಇವರ ಆಸ್ಥಾನ ಕವಿ ಬಸವಪ್ಪ ಶಾಸ್ತ್ರಿ. ಇವರಿಂದ ರಚನೆಗೊಂಡ 'ಕರ್ನಾಟಕ ಅಭಿಜ್ಞಾನ ಶಾಕುಂತಲ' ನಾಟಕ ಇಂದಿಗೂ ಪ್ರಸಿದ್ಧವಾಗಿದೆ. 'ಚಂಡಕೌಶಿಕ' ಮತ್ತು 'ಉತ್ತರ ರಾಮಚರಿತ್ರೆ'ಯೆಂಬ ಬೇರೆ ಎರಡು ಸಂಸ್ಕೃತ ನಾಟಕಗಳನ್ನು ಈ ಕವಿ ಕನ್ನಡಕ್ಕೆ ಅನುವಾದ ಮಾಡಿದಾನೆ. ಇವಲ್ಲದೆ 'ದಮಯಂತೀ ಸ್ವಯಂವರ', 'ಸಾವಿತ್ರಿ ಚರಿತ್ರೆ' ಎಂಬ ಎರಡು ಕಾವ್ಯಗಳನ್ನು ರಚಿಸಿದ್ದಾನೆ. ಮೊದಲನೆಯದು ಚಂಪೂ. ಎರಡನೆಯದು ಷಟ್ಪದಿ, ಒಥೆಲೋ ಎಂಬ ಇಂಗ್ಲಿಷ್ ನಾಟಕವನ್ನು ಪರಿವರ್ತಿಸಿ 'ಶೂರಸೇನ ಚರಿತ್ರೆ' ಎಂಬ

ನಾಟಕವನ್ನು ರಚಿಸಿದ್ದುದಲ್ಲದೇ ಬಸವಪ್ಪಶಾಸ್ತ್ರಿಗಳು 'ಭರ್ತೃಹರಿ ಸುಭಾಷಿತ'ವನ್ನು ಕನ್ನಡಸಿದ್ದಾರೆ.

ಈ ಕಾಲಘಟ್ಟದಲ್ಲಿ ಕನ್ನಡಕ್ಕೆ ಒಡೆಯರ ವಂಶಜರು ನೀಡಿದ ದೊಡ್ಡ ಕಾಣಿಕೆ ಶ್ರೀ ಜಯಚಾಮರಾಜೇಂದ್ರ ಗ್ರಂಥಮಾಲೆ. ಶ್ರೀ ಜಯಚಾಮರಾಜೇಂದ್ರ ಒಡೆಯರ್ ಋಗ್ವೇದವೇ ಮೊದಲಾದ ಅನೇಕ ವೇದ–ಪುರಾಣಗಳನ್ನು ಕನ್ನಡದಲ್ಲಿ ಅರ್ಥ ಸಮೇತವಾಗಿ ಅನುವಾದಿಸಿ, ಪ್ರಕಟಣೆ ಮಾಡಿಸಿದ್ದಾರೆ. ಇದರಿಂದ ಕನ್ನಡ ಜನಕ್ಕೆ ಮಹದೋಪಕಾರ ಆಗಿದೆ. ವೈದಿಕಧರ್ಮದ ಮೂಲಾಧಾರಗಳಿಂದ ಈ ಪವಿತ್ರ ಗ್ರಂಥಗಳನ್ನು ಕನ್ನಡ ಲಿಪಿಯಲ್ಲಿ ಹೆಚ್ಚುಮಾಡಿಸಿ ಯಥಾರ್ಥವಾದ ಕನ್ನಡ ಅನುವಾದವನ್ನು ಕೊಟ್ಟಿರುವುದು ಸಂಸ್ಕೃತ ಪಾಂಡಿತ್ಯವಿಲ್ಲದ ಕನ್ನಡಿಗರಿಗೂ ಜ್ಞಾನ ಭಂಡಾರದ ಬಾಗಿಲುಗಳನ್ನು ತೆರೆದಂತಾಗಿದೆ. ಹೀಗೆ ರಾಜ ಒಡೆಯರ ಕಾಲದಿಂದಲೂ ಮೈಸೂರು ಅರಸು ಮನೆತನ ಸಾಹಿತ್ಯ–ಸಂಗೀತಾದಿ–ಕಲೆಗಳಿಗೆ ಅಪಾರ ಪ್ರೋತ್ಸಾಹವನ್ನು ಕೊಡುತ್ತಾ ಬಂದಿದೆ.

**ಪರಾಮರ್ಶನ ಗ್ರಂಥಗಳು:**

1. ಮುಗಳಿ ರಂ. ಶ್ರೀ. (1999). ಕನ್ನಡ ಸಾಹಿತ್ಯ ಚರಿತ್ರೆ. ಗೀತಾ ಬುಕ್ ಹೌಸ್. ಮೈಸೂರು.
2. ಪಾಲಾಕ್ಷ. (2019). ಸಮಗ್ರ ಕರ್ನಾಟಕ ಇತಿಹಾಸ. ಶಶಿ ಪ್ರಕಾಶನ. ತುಮಕೂರು.
3. ಸದಾಶಿವ ಕೆ. (2000). ಕರ್ನಾಟಕ ಪ್ರೌಢ ಇತಿಹಾಸ. 2000. ಪ್ರಿಯದರ್ಶಿನಿ ಪ್ರಕಾಶನ. ಮೈಸೂರು.
4. ಅಶ್ವತಪ್ಪ ಕೆ. ಎನ್. (2023). ಸಮಗ್ರ ಕರ್ನಾಟಕದ ಇತಿಹಾಸ. ಲಕ್ಷ್ಮಿ ಮುದ್ರಣಾಲಯ. ಬೆಂಗಳೂರು.
5. ಶಿವಪ್ಪ ಜಿ. (2021). ಸಮಗ್ರ ಕರ್ನಾಟಕದ ಇತಿಹಾಸ. ಸಪ್ನ ಬುಕ್‌ಹೌಸ್. ಮೈಸೂರು.
6. ಪರಮೇಶ್ವರ ಬಿ. ಕರ್ನಾಟಕ ಇತಿಹಾಸ ಪರಿಚಯ. ಮೈಸೂರು ಬುಕ್‌ಹೌಸ್. ಮೈಸೂರು.